# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 26

ಸದಸ್ಯರ ಹೆಸರು : ಶ್ರೀ ಯು.ಬಿ.ವೆಂಕಟೇಶ್
(ನಾಮ ನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ : 19-12-2022

ಉತ್ತರಿಸುವ ಸಚಿವರು : ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

****

| | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ರಸ್ತೆ ಬದಿ ಅಪಾಯಕಾರಿ ಸ್ಥಿತಿಯಲ್ಲಿರುವ ಪರಿವರ್ತಕಗಳ ಬಗ್ಗೆ ಬೆಸ್ಕಾಂ ಸಂಸ್ಥೆಯು ಸರ್ವೆ ನಡೆಸಿದೆಯೇ; ಈ ಅಪಾಯಕಾರಿ ಸ್ಥಿತಿಯಲ್ಲಿರುವ ಪರಿವರ್ತಕಗಳ ಸ್ಥಳಾಂತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ಪಾದಚಾರಿ ಮಾರ್ಗಗಳಲ್ಲಿರುವ ಒಟ್ಟು 5,784 ಪರಿವರ್ತಕಗಳಿಂದ ಅಪಾಯಕಾರಿ/ ಪಾದಚಾರಿಗಳಿಗೆ ಅಡಚಣೆಯಾಗುತ್ತಿರುವುದನ್ನು ಗುರುತಿಸಲಾಗಿದ್ದು, ಸದರಿ ಪರಿವರ್ತಕಗಳನ್ನು ಹೊಸ ವಿನ್ಯಾಸಕ್ಕೆ ಬದಲಾವಣೆ ಮಾಡಲು ಅವಶ್ಯಕತೆಯಿರುತ್ತದೆ. ಪಾದಚಾರಿ-ಮಾರ್ಗಗಳಲ್ಲಿನ ಪರಿವರ್ತಕಗಳನ್ನು ಅನುಕೂಲಕರವಾಗಿರುವ ಪರ್ಯಾಯ ಸ್ಥಾನಗಳಿಗೆ ಸ್ಥಳಾಂತರಿಸುವುದು ಹಾಗೂ ಸ್ಥಳಾಂತರಿಸಲು ಸಾಧ್ಯವಾಗದ ಪರಿವರ್ತಕ ಕೇಂದ್ರಗಳನ್ನು ಹೊಸ ವಿನ್ಯಾಸಕ್ಕೆ ಬದಲಾಯಿಸಲಾಗುತ್ತಿರುತ್ತದೆ.<br><br>ಬೆಂಗಳೂರು ವಿದ್ಯುತ್ ಕಂಪನಿ ವ್ಯಾಪ್ತಿಯಲ್ಲಿ ಪಾದಚಾರಿ ಪರಿವರ್ತಕ ಕೇಂದ್ರಗಳನ್ನು ಹೊಸ ವಿನ್ಯಾಸಕ್ಕೆ ಬದಲಾಯಿಸುವ ಹಂತ-1 ರ ಕಾಮಗಾರಿಗಳನ್ನು ಸೆಪ್ಟಂಬರ್-2017 ರಲ್ಲಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕೈಗೆತ್ತಿಕೊಂಡಿದ್ದು, 3194 ಪಾದಚಾರಿ ಮಾರ್ಗದಲ್ಲಿರುವ ಪರಿವರ್ತಕ ಕೇಂದ್ರಗಳನ್ನು ಹೊಸ ವಿನ್ಯಾಸಕ್ಕೆ ಪರಿವರ್ತಿಸಿ ಹಾಗೂ 02 ಪರಿವರ್ತಕ ಕೇಂದ್ರಗಳನ್ನು (ಒಟ್ಟು 3196) ಪಾದಚಾರಿ ಮಾರ್ಗದಿಂದ ಸ್ಥಳಾಂತರಿಸಿ ಪಾದಚಾರಿಗಳಿಗೆ ಸಂಚರಿಸಲು ಅನುಕೂಲವಾಗುವಂತೆ ಮಾಡಲಾಗಿದೆ. ಹಂತ-1 ರ ಕಾಮಗಾರಿಗಳು ಸೆಪ್ಟಂಬರ್-2019 ಕ್ಕೆ ಮುಕ್ತಾಯಗೊಂಡಿರುತ್ತದೆ.<br><br>ಮುಂದುವರೆದು, ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಪಾದಚಾರಿ ಪರಿವರ್ತಕ ಕೇಂದ್ರಗಳ ಪುನರ್ ಸರ್ವೆ ಮಾಡಿ ಬಾಕಿ ಇರುವ 2588 ಪರಿವರ್ತಕ ಕೇಂದ್ರಗಳನ್ನು ಹಂತ-2 ರ ಕಾಮಗಾರಿಯಡಿಯಲ್ಲಿ ಕೈಗೆತ್ತಿಕೊಂಡು, ಮಾರ್ಚ್-2022 ರಲ್ಲಿ ಕಾರ್ಯಾದೇಶ ನೀಡಲಾಗಿರುತ್ತದೆ. ಹಂತ-2 ರ ಅಡಿಯಲ್ಲಿ ನವೆಂಬರ್ 2022 ರ ಅಂತ್ಯಕ್ಕೆ 1465 ಪಾದಚಾರಿ ಪರಿವರ್ತಕ ಕೇಂದ್ರಗಳನ್ನು ಹೊಸ ವಿನ್ಯಾಸಕ್ಕೆ ಬದಲಾಯಿಸಿ ಪಾದಚಾರಿಗಳಿಗೆ |

...2

| | | |
|---|---|---|
| | | ಅನುಕೂಲವಾಗುವಂತೆ ಮಾಡಲಾಗಿದೆ. ಉಳಿದ 1123 ಪಾದಚಾರಿ ಪರಿವರ್ತಕ ಕೇಂದ್ರಗಳನ್ನು ಸೆಪ್ಟಂಬರ್-2023 ರೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. |
| ಆ) | ಅಪಾಯಕಾರಿ ಪರಿವರ್ತಕಗಳಿಂದ ಆಗಿರುವ ಸಾವುಗಳ ಸಂಖ್ಯೆ ಎಷ್ಟು; ಇವರಿಗೆ ನೀಡಲಾದ ಪರಿಹಾರದ ಮೊತ್ತವೆಷ್ಟು; | ಬೆಂಗಳೂರು ವಿದ್ಯುತ್ ಕಂಪನಿ ವ್ಯಾಪ್ತಿಯಲ್ಲಿ ಪರಿವರ್ತಕಗಳಿಂದ ಆಗಿರುವ ಮಾರಣಾಂತಿಕ ಅವಘಡಗಳ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| ಇ) | ಸರ್ಕಾರ ಯಾವ ಕಾಲಮಿತಿಯೊಳಗೆ ಅಪಾಯಕಾರಿ ಪರಿವರ್ತಕಗಳನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳುವುದು? | ಬೆಂಗಳೂರು ವಿದ್ಯುತ್ ಕಂಪನಿ ವ್ಯಾಪ್ತಿಯ ಪಾದಚಾರಿ ಪರಿವರ್ತಕ ಕೇಂದ್ರಗಳನ್ನು ಹೊಸ ವಿನ್ಯಾಸಕ್ಕೆ ಬದಲಾಯಿಸುವ / ಸ್ಥಳಾಂತರಿಸುವ ಕಾಮಗಾರಿಯನ್ನು ಸೆಪ್ಟಂಬರ್-2023 ರೊಳಗಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. |

ಸಂಖ್ಯೆ: ಎನರ್ಜಿ 258 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ. ವೆಂಕಟೇಶ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 26 ಕ್ಕೆ ಅನುಬಂಧ**

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ಪರಿವರ್ತಕಗಳಿಂದ ಆಗಿರುವ ಮಾರಣಾಂತಿಕ ಅವಘಡಗಳ ವಿವರಗಳು

| ಕ್ರ. ಸಂ | ವರ್ಷ | ಜಿಲ್ಲೆ | ತಾಲ್ಲೂಕು | ಅಪಘಾತಕ್ಕೊಳಗಾದ ವ್ಯಕ್ತಿಯ ವಿವರ (ವಿಳಾಸ) | ದಿನಾಂಕ | ಮಾರಣಾಂತಿಕ/ ಮಾರಣಾಂತಿಕವಲ್ಲದ | ಪರಿಹಾರ ನೀಡಿದ ಮೊತ್ತ ಲಕ್ಷ ರೂ ಗಳಲ್ಲಿ | ಷರಾ |
|---|---|---|---|---|---|---|---|---|
| 1 | 2019-20 | ಅಪಾಯಕಾರಿ ಪರಿವರ್ತಕಗಳಿಂದ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ | | | | | | |
| 2 | 2020-21 | ಅಪಾಯಕಾರಿ ಪರಿವರ್ತಕಗಳಿಂದ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ | | | | | | |
| 3 | 2021-22 | ಬೆಂಗಳೂರು | ಕೆಂಗೇರಿ ಬೆಂಗಳೂರು ನಗರ | ಶ್ರೀ. ಶಿವರಾಜ್ ಹಾಗೂ ಕುಮಾರಿ\|\| ಚೈತನ್ಯ. ಮಂಗನಹಳ್ಳಿ, ಸೂಲಿಕೆರೆ ಪೋಸ್ಟ್ | 23.03.2022 | ಮಾರಣಾಂತಿಕ | 20 | ಆಂತರಿಕ ದೋಷದಿಂದ ಪರಿವರ್ತಕದಲ್ಲಿರುವ ತೈಲವು ತಾಪಮಾನ ಹೆಚ್ಚಿಸಿಕೊಂಡಿರುವ ಕಾರಣ ಪರಿವರ್ತಕದಲ್ಲಿ ಒತ್ತಡ ಉಂಟಾಗಿ ತೈಲವು ಹೊರಚಿಮ್ಮಿದಾಗ ಈ ಅಪಘಾತ ಸಂಭವಿಸಿರುತ್ತದೆ. |
| 4 | 2022-23 ಆಕ್ಟೋಬರ್ ಅಂತ್ಯಕ್ಕೆ) | ಅಪಾಯಕಾರಿ ಪರಿವರ್ತಕಗಳಿಂದ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ | | | | | | |